**ಕರ್ನಾಟಕ ಸರ್ಕಾರ**
**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 08–01–2021**

# ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ

ನ್ಯಾಯಾಲಯ ಹಾಗೂ ಕಾನೂನುಗಳ ಸಾಮಾಜಿಕ ಮುಖ–ನಿವೃತ್ತ ನ್ಯಾಯಮೂರ್ತಿ ಎ. ವಿ. ಚಂದ್ರಶೇಖರ್

ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):

ಕಾನೂನು ಪ್ರಾಧಿಕಾರದ ಮುಖ್ಯ ಉದ್ದೇಶ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರಿಗೆ ಉಚಿತ ಕಾನೂನು ಸೇವೆಯ ಅರಿವು ನೆರವು ಹಾಗೂ ಜನತಾ ನ್ಯಾಯಾಲಯದ ಮುಖಾಂತರ ತ್ವರಿತ ನ್ಯಾಯ ಒದಗಿಸುವುದಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಎ. ವಿ. ಚಂದ್ರಶೇಖರ್ ಅವರು ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಾರ್ಯಗಳು ಹಾಗೂ ಜವಾಬ್ದಾರಿ ಕುರಿತು ಇಂದು ನಗರದ ನ್ಯಾಯದೇಗುಲದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ರಿಟ್ ಅರ್ಜಿಗಳಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಸಾಧನವಾಗಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿದ್ದು, ಪ್ರಾಧಿಕಾರ ನ್ಯಾಯಾಲಯ ಹಾಗೂ ಕಾನೂನುಗಳ ಸಾಮಾಜಿಕ ಮುಖವಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಸರ್ವರಿಗೂ ನ್ಯಾಯ ಎಂಬ ಧ್ಯೇಯೋಧ್ದೇಶದಿಂದ ಆರಂಭವಾದ ಪ್ರಾಧಿಕಾರ ಇಂದು ಹಲವು ಹೊಸ ಬಗೆಯ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಹಾಗೂ ತ್ವರಿತಗತಿಯಲ್ಲಿ ದಾವೆಗಳನ್ನು ಬಗೆಹರಿಸಿ ಜನರಿಗೆ ಪರಿಹಾರ ಒದಗಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಿದರು.

ರಾಷ್ಟ್ರ, ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಪ್ರಾಧಿಕಾರ ಶಾಖೆಗಳನ್ನು ಹೊಂದಿದ್ದು ಸಮಾಜದ ಕಟ್ಟ ಕಡೆಯ ವ್ಯಕ್ತಿಯು ಕೂಡಾ ತಮ್ಮ ತಾಲ್ಲೂಕು ಮಟ್ಟದ ಪ್ರಾಧಿಕಾರದಲ್ಲಿ ದಾವೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವುದರ ಮೂಲಕ ಸುಪ್ರೀಂ ಕೋರ್ಟ್‌ನಲ್ಲಿಯೂ ಸಹ ದಾವೆ ಹೂಡಬಹುದಾಗಿದೆ.

ವಾರ್ಷಿಕ ರೂ. 10.00 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಮಹಿಳೆಯರು, ಮಕ್ಕಳು, ಮೂರು ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಸಾರ್ವಜನಿಕರು, ಪರಿಶಿಷ್ಟ ಜಾತಿ, ಪಂಗಡ ಹಾಗೂ ಕಾರ್ಮಿಕರು ಉಚಿತವಾಗಿ ಕಾನೂನಿನ ಸೇವೆಯನ್ನು ಪಡೆಯಬಹುದಾಗಿದ್ದು ಇದಕ್ಕಾಗಿ ತಮ್ಮ ಹತ್ತಿರದ ಪ್ರಾಧಿಕಾರದ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು.

ರಾಷ್ಟ್ರಮಟ್ಟದಲ್ಲಿ ಆಸಿಡ್ ದಾಳಿ ಸಂತ್ರಸ್ತರಿಗೆ ಕಾನೂನು ಸೇವೆಗಳು, ಮಾನಸಿಕ ಅಶಕ್ತ ವ್ಯಕ್ತಿಗಳಿಗೆ ಕಾನೂನು ಸೇವೆಗಳು, ಲೈಂಗಿಕ ಶೋಷಣೆಯ ಸಂತ್ರಸ್ತರಿಗೆ ಕಾನೂನು ಸೇವೆ, ಮಾದಕ ವಸ್ತುಗಳಿಗೆ ಸಂಬಂಧಿಸಿದಂತೆ ಕಾನೂನು ಸೇವೆ, ಹಿರಿಯ ನಾಗರೀಕರಿಗೆ ಸಂಬಂಧಿಸಿದಂತೆ ಕಾನೂನು ಸೇವೆ, ಬಾಲಸ್ನೇಹಿ ಕಾನೂನು ಸೇವೆಗಳು ಹಾಗೂ ಕಾರ್ಮಿಕರ ಕಾನೂನು ಸೇವೆಗಳು ಸೇರಿದಂತೆ ಒಟ್ಟು 11 ರಾಷ್ಟ್ರಮಟ್ಟದ ಸಮಿತಿಗಳಿದ್ದು ಈ ಸಮಿತಿಗಳಿಗೆ ನಿವೃತ್ತ ನ್ಯಾಯಾಧೀಶರುಗಳು ಮುಖ್ಯಸ್ಥರಾಗಿರುತ್ತಾರೆ. ಅದೇ ರೀತಿಯಲ್ಲಿ ರಾಜ್ಯದಲ್ಲಿ ಸಹ 8 ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು ಅವುಗಳನ್ನು ರಾಜ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಕಾರ್ಯನಿರ್ವಹಿಸಲಾಗುತ್ತದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು 19.9.2020 ರಂದು **ಲೋಕ್ ಅದಾಲತ್ ಅನ್ನು** ವ್ಯವಸ್ಥೆಗೊಳಿಸಿತಲ್ಲದೆ 19.12.2020 ರಂದು ಬೃಹತ್ **ಲೋಕ್ ಅದಾಲತ್ ಅನ್ನು** ಕರ್ನಾಟಕ ರಾಜ್ಯದಾದ್ಯಂತ ನಡೆಸಿತು. ಎರಡೂ **ಲೋಕ್ ಅದಾಲತ್** ವ್ಯಾಜ್ಯಕಾರ ಸಾರ್ವಜನಿಕರಿಂದ ಅದ್ಭುತವಾದ ಪ್ರತಿಕ್ರಿಯೆಯನ್ನು ಪಡೆದವು ಮತ್ತು ಅವು ಅದ್ಭುತ ಯಶಸ್ಸನ್ನು ಪಡೆದವು.

19.9.2020 ರಂದು ನಡೆದ ಇ-**ಲೋಕ್ ಅದಾಲತ್** ರಾಜ್ಯದಾದ್ಯಂತ ಒಟ್ಟು 1,15,938 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು. ಇ-**ಲೋಕ್ ಅದಾಲತ್** ಇತ್ಯರ್ಥಗೊಂಡ ಪ್ರಕರಣಗಳಲ್ಲಿನ ಒಟ್ಟು ಮೊತ್ತ 357,71,94,758/- ರೂಪಾಯಿಗಳು 19.12.2020 ರಂದು ನಡೆದ ಬೃಹತ್ **ಲೋಕ್ ಅದಾಲತ್ ಭೌತಿಕ ಹಾಗೂ ಇ-ಲೋಕ್ ಅದಾಲತ್‌ಗಳ ಮಿಶ್ರಣವಾಗಿದ್ದು,** ರಾಜ್ಯದಾದ್ಯಂತ ಒಟ್ಟು 2,63,215 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು. ಈ ಬೃಹತ್ **ಲೋಕ್ ಅದಾಲತ್** ಇತ್ಯರ್ಥಗೊಂಡ ಪ್ರಕರಣಗಳಲ್ಲಿನ ಒಟ್ಟು ಮೊತ್ತ **ರೂ.** 702,16,24,927/ ರೂಪಾಯಿಗಳು **ಸದರಿ ಲೋಕ್ ಅದಾಲತ್‌ನಲ್ಲಿ** ಕರ್ನಾಟಕ ರಾಜ್ಯದಾದ್ಯಂತ ಒಟ್ಟು 3099 ಆಸ್ತಿ ವಿಭಜನೆ ಪ್ರಕರಣಗಳನ್ನು ಇತ್ಯರ್ಥಗೊಳಿಸಿರುವುದು ಒಂದು ಸಾಧನೆ.

ಒಟ್ಟಾರೆಯಾಗಿ ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳು ಇಡೀ ಸರ್ಕಾರದ ಕಾರ್ಯ ಯಂತ್ರವನ್ನು ಸೂಕ್ಷ್ಮಗೊಳಿಸಿ ಚುರುಕುಗೊಳಿಸಿದೆ. ತನ್ಮೂಲಕ ಅಂತಿಮವಾಗಿ ಅದು ಸಮಾಜದ ಶೋಷಿತ ಮತ್ತು ದುರ್ಬಲ ವರ್ಗಗಳಿಗೆ ಸಹಾಯ ಮಾಡಿದೆ. ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಮಾಡಿದ ಪ್ರಾಮಾಣಿಕ ಪ್ರಯತ್ನವು ಅದು ಗರಿಷ್ಠ ಮಟ್ಟ ಮುಟ್ಟುವವರೆಗೂ

ಇರುತ್ತದೆ. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಕಾನೂನು ಸೇವೆಗಳ ಸಂಸ್ಥೆಗಳ ಚಟುಚಟಿಕೆಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸುತ್ತಿರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಜಿಲಾ ಮಟ್ಟದಲ್ಲಿ ಒಟ್ಟು 30 ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳು ಮತ್ತು ತಾಲ್ಲೂಕು ಮಟ್ಟದಲ್ಲಿ 149 ತಾಲ್ಲೂಕು ಕಾನೂನು ಸೇವೆಗಳ ಸಮಿತಿಗಳಿವೆ. ಇವಲ್ಲದೆ ದಿನದ ಇಪ್ಪತ್ನಾಲ್ಕು ಗಂಟೆಗಳೂ ಕಾರ್ಯ ನಿರ್ವಹಿಸುವ 1800–425–90900 ಸಂಖ್ಯೆಯ ಸಹಾಯವಾಣಿಯನ್ನು ಯಾವುದೇ ರೀತಿಯ ಕಾನೂನು ಸಲಹೆ ಮತ್ತು ವಿಚಾರಣೆಗಳಿಗಾಗಿ ಸಮರ್ಪಿಸಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಯೋಜನೆಗಳನ್ನು ಸುಮಾರು 7 ಜನ ನಿವೃತ್ತ ನ್ಯಾಯಮೂರ್ತಿಗಳ ಮುಂದಾಳತ್ವದಲ್ಲಿ ಕೈಗೆತ್ತಿಕೊಂಡಿದ್ದು, ನಮ್ಮ ಪ್ರಾಧಿಕಾರದ ಪ್ರಧಾನ ಪೋಷಕರು ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯದ ಗೌರವಾನ್ವಿತ ಮುಖ್ಯ ನಾರ್ಯಮೂರ್ತಿಗಳಾದ ಅಭಯ್ ಶ್ರೀನಿವಾಸ ಓಕ್ ಹಾಗೂ ಕಾರ್ಯನಿರ್ವಾಹಕ ಅಧ್ಯಕ್ಷರಾದ ಗೌರವಾನ್ವಿತ ನ್ಯಾಯಮೂರ್ತಿ ಅರವಿಂದ್ ಕುಮಾರ್ ಸೂಕ್ತ ಮಾರ್ಗದರ್ಶನ ಇರುತ್ತದೆ. ಉಚಿತ ಮತ್ತು ಸಕ್ಷಮ ಕಾನೂನು ಸೇವೆಗಳು ಸಮಾಜದ ಕೊಟ್ಟ ಕೊನೆ ಪ್ರಜೆಗೂ ತಲುಪುವುದನ್ನು ಖಚಿತಪಡಿಸಿಕೊಳ್ಳುವ ಪ್ರಯತ್ನ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ್ದಾಗಿದ್ದು ಆ ಮೂಲಕ ಕಾನೂನು ಸೇವೆಗಳ ಸಂಸ್ಥೆಯ ಧ್ಯೆಯೋದ್ದೇಶವನ್ನು ಸಾಧಿಸಲಾಗಿದೆ ಎಂದು ಹೇಳಿದರು.

**2030 ರೊಳಗೆ ಎಲ್ಲ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು**

**ಸೂಕ್ತ ಕಾರ್ಯಯೋಜನೆ - ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ**

ಬೆಂಗಳೂರು,ಜನವರಿ೦8: 2030 ರೊಳಗೆ ರಾಜ್ಯದ ಸರ್ವಾಂಗಿಣ ಅಭಿವೃದ್ಧಿಗಾಗಿ ಹಮ್ಮಿಕೊಂಡಿರುವ ವಿವಿಧ ಕ್ಷೇತ್ರದಲ್ಲಿ ಗುರುತಿಸಲಾಗಿರುವ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸೂಕ್ತ ಕಾರ್ಯಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ವಿಧಾನ ಸೌಧದ ಸಮ್ಮೇಳನಾ ಸಭಾಂಗಣದಲ್ಲಿಂದು ನಡೆದ ಪ್ರಥಮ ಯೋಜನಾ ಮಂಡಳಿ ಸಭೆಯ ಅಧ್ಯಕ್ಷವಹಿಸಿ ಮಾತಾನಾಡಿದ ಅವರು 17 ಸುಸ್ಥಿರ ಅಭಿವೃದ್ಧಿಯಲ್ಲಿ ಕರ್ನಾಟಕ 100 ಕ್ಕೆ 66 ಅಂಕಗಳೊಂದಿಗೆ ದೇಶದಲ್ಲಿ 6 ನೇ

ಸ್ಥಾನದಲ್ಲಿದೆ.  ಬಡತನ ಮುಕ್ತ, ಹಸಿವು ಮುಕ್ತ, ಲಿಂಗ ಸಮಾನತೆ, ಕೈಗಾರಿಕೆ, ನಾವೀನ್ಯತೆ ಮತ್ತು ಮೂಲಸೌಕರ್ಯ ಹಾಗೂ ಸುಸ್ಥಿರ ನಗರಗಳು ಮತ್ತು ಸಮುದಾಯಗಳು- ಈ ಆರು ಗುರಿಗಳಲ್ಲಿ ನಿರೀಕ್ಷಿತ ಪ್ರಗತಿ ಸಾಧಿಸಬೇಕಿದೆ. ಈ ಗುರಿಗಳ ಪೈಕಿ ವಿಷಯವಾರು ತಜ್ಞರ ಅಧ್ಯಯನ ಮತ್ತು ಸಲಹೆಗಳನ್ನು ಆಧರಿಸಿ ವರದಿ ನೀಡಲು ರಾಜ್ಯ ಯೋಜನಾ ಮಂಡಳಿ ಕ್ರಮ ಕೈಗೊಳ್ಳಲಿದೆ ಎಂದು ಹೇಳಿದರು.

ರಾಜ್ಯಯೋಜನಾ ಮಂಡಳಿಯ ಉಪಾಧ್ಯಕ್ಷ ಬಿ.ಜೆ.ಪುಟ್ಟಸ್ವಾಮಿ ಅವರು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಹಾಗೂ ಈವರೆಗೆ ನಡೆಸಿದ ಅಧ್ಯಯನದ ಬಗ್ಗೆ ವಿವರಿಸಿದರು.

**ಸಭೆಯಲ್ಲಿ ಕೈಗೊಂಡ ಪ್ರಮುಖ ತೀರ್ಮಾನಗಳು :**

- ಕರ್ನಾಟಕ ರಾಜ್ಯ ಯೋಜನಾ ಮಂಡಳಿಯನ್ನು“**ಕರ್ನಾಟಕ ರಾಜ್ಯನೀತಿ ಮತ್ತುಯೋಜನೆ ಆಯೋಗ”(Karnataka State Policy and Planning Commission)** ಎಂದು ಮರುನಾಮಕರಣ ಮಾಡುವುದರೊಂದಿಗೆ ಬಲವರ್ಧನೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಲಹಾ ಸಮಿತಿಗಳನ್ನು ರಚಿಸಲು ಹಾಗೂ ಸಲಹಾ ಸಮಿತಿ ರಚನೆ(ಮಾದರಿ) ಯನ್ನುಅನುಮೋದಿಸಲಾಯಿತು.
- 5 ತಾಂತ್ರಿಕವಿಭಾಗಗಳಿಗೆಅನುಮೋದನೆಹಾಗೂಯೋಜನಾಮಂಡಳಿಯಲ್ಲಿ 2 ರಿಸರ್ಚ್ ಆಫೀಸರ್ ಹುದ್ದೆಗಳು ಇದ್ದು, ಹೆಚ್ಚುವರಿಯಾಗಿ 3 ರಿಸರ್ಚ್ ಆಫೀಸರ್ ಹುದ್ದೆಗಳಮಂಜೂರಾತಿಗೆ ತೀರ್ಮಾನ.
- ಕರ್ನಾಟಕದಲ್ಲಿ“**ಸಿ.ಎಂಡ್ಯಾಶ್ಬೋರ್ಡ್**”ಅಭಿವೃದ್ಧಿಪಡಿಸುವುದು. command, Control, computers, communication and combat **ಈ ಡ್ಯಾಶ್ ಬೋರ್ಡ್ ನಿಂದ ಏಕಕಾಲದಲ್ಲಿ ಆರ್ಥಿಕ ವ್ಯವಸ್ಥೆಯ ಮೇಲ್ವಿಚಾರಣೆ ಹಾಗು ನಿರ್ಧರಿತ ಸಮಯದಲ್ಲಿಅಭಿವೃದ್ಧಿ ಯೋಜನೆಗಳುಪುರ್ಣಗೊಳಿಸಲು ಸಾಧ್ಯವಾಗಲಿದೆ.** .
- ಪ್ರಾದೇಶಿಕ ಸಮತೋಲನೆಗೆ ರಾಜ್ಯದ ಸರಾಸರಿಗಿಂತ ಕಡಿಮೆ ಇರುವ ತಾಲ್ಲೂಕುಗಳಿಗೆ ಹೆಚ್ಚಿನ ಒತ್ತು ನೀಡುವುದು.

- ಬಡವರಿಗೆ ಎಲ್ಲಾ ರಾಜ್ಯ ಸೌಲಭ್ಯಗಳನ್ನು ಒದಗಿಸಲು ಏಕಗವಾಕ್ಷಿ ವ್ಯವಸ್ಥೆ. ಇದರ ಅಡಿಯಲ್ಲಿ ಪಡಿತರ□□ಟಿ, ೩-೬ ತಿಂಗಳ ಮಕ್ಕಳಿಗೆ ಮನೆಗೆ ಆ ಹಾರ ವಸ್ತುಗಳು ಪೂರೈಕೆ, ಮಾತೃಪೂರ್ಣ ಯೋಜನೆ, ಮಾತೃ ವಂದನಾ ಯೋಜನೆ, ಹಿರಿಯ ನಾಗರಿಕರಿಗೆ ಮಧ್ಯಾಹ್ನದಊಟ, ತಾಯಿಚೀಟಿ, ಆಯುಶ್ಯಮಾನ್ ಭಾರತ ಆರೋಗ್ಯಚೀಟಿ, ವೃದ್ಧಾಪ್ಯವೇತನ, ವಿಧವಾವೇತನ, ಕಾರ್ಮಿಕ□□□□, ಹಿರಿಯನಾಗರಿಕರ ಚೀಟಿ, ಮೈತ್ರಿ, ಮನಸ್ವಿನಿ, ವಸತಿ ಯೋಜನೆಗಳು ಮುಂತಾದ ಯೋಜನೆಗಳ ಸೌಲಭ್ಯಗಳು ಕೇಂದ್ರಿಕೃತವಾಗಿ ಒದಗಿಸುವುದು.
- ಜಿಲ್ಲಾ ಯೋಜನಾ ಸಮಿತಿಗಳನ್ನು“**ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನೆ ಆಯೋಗ**”ದೊಂದಿಗೆ ಸಮೀಕರಿಸುವುದು.
- ಗ್ರಾಮಮಟ್ಟದ “**ಗ್ರಾಮ ಅಭಿವೃದ್ಧಿ ಯೋಜನೆ**”ತಯಾರಿಸುವುದು.
- ಆದಿವಾಸಿ ಬುಡಕಟ್ಟು ಜನಾಂಗದ ಅಭಿವೃದ್ಧಿ ಯೋಜನೆಗೆ ರೂ.600 ಕೋಟಿಗಳ ಅನುದಾನ ಒದಗಿಸುವುದು.
- 2021-22ನೇ ಸಾಲಿನ ಆಯವ್ಯಯ ಪೂರ್ವಭಾವಿ ಸಭೆಯಲ್ಲಿ ಯೋಜನೆಗಳ ಸಮೀಕರಣ ಮಾಡುವುದು.
- GSDP ಅಂದಾಜು ವಿಧಾನ ಹಾಗೂ ಸಮೀಕ್ಷೆಗಳು ತೆಗೆದುಕೊಳ್ಳುವುದು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆದಾಯ ವೃದ್ಧಿಸಲು ವಿಧಾನಗಳ ಕುರಿತು ಯೋಜನೆ ರೂಪಿಸುವುದು.
- ಎಂಎಸ್ಎಂಇ ಪುನಶ್ಚೇತನಗೊಳಿಸಲು ವರಿದಿಯನ್ನು ಐಸೆಕ್ ವತಿಯಿಂದ ಸಿದ್ಧಪಡಿಸುವುದು.
- ಕರಾವಳಿ ಜಿಲ್ಲೆಗಳ ಅಭಿವೃದ್ಧಿಗಾಗಿ ಸಮಗ್ರ ಯೋಜನೆ ರೂಪಿಸಿ' ಮತ್ಸ್ಯಸಂಪದ' ಯೋಜನೆಯಡಿ ಆತ್ಮನಿರ್ಭರ್ ಯೋಜನೆಯ ಅನುದಾನ ಪಡೆಯುವುದು.
- ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ“**SDG Outreach Centre**”ಸ್ಥಾಪಿಸುವುದು.
- ಬೆಂಗಳೂರಿನಲ್ಲಿ“ಕರ್ನಾಟಕ ವಿಜ್ಞಾನ ನಗರ”ಪಿಪಿಪಿಅಡಿಯಲ್ಲಿಸ್ಥಾಪಿಸುವುದು.

- ಆಯವ್ಯಯದಲ್ಲಿ ಯೋಜನೆಗಳಿಗೆ ನಿಗದಿಪಡಿಸಿದ ಒಟ್ಟು ಅನುದಾನಕ್ಕೆ ಶೇ.1ರಷ್ಟು ಕರ್ನಾಟಕಇನ್ನೋವೇಷನ್ ಕಾರ್ಯಕ್ರಮಗಳಿಗೆ ಒದಗಿಸುವುದು.
- ಜಿಲ್ಲಾ ಯೋಜನಾ ವಿಭಾಗವನ್ನು"ಕರ್ನಾಟಕ ರಾಜ್ಯನೀತಿ ಮತ್ತುಯೋಜನೆಆಯೋಗದ"ವ್ಯಾಪ್ತಿಗೆ ತರುವುದು.
- ನೀತಿ ಆಯೋಗದಲ್ಲಿದಂತೆ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವನ್ನು"ಕರ್ನಾಟಕ ರಾಜ್ಯನೀತಿ ಮತ್ತುಯೋಜನೆ ಆಯೋಗದ"ವ್ಯಾಪ್ತಿಗೆ ತರುವುದು.
- ನೀತಿ ಆಯೋಗದ **Development Monitoring and Evaluation Office (DMEO)** ದಲ್ಲಿದಂತೆ ಕರ್ನಾಟಕದಲ್ಲಿ ಮೌಲ್ಯಮಾಪನ ವ್ಯವಸ್ಥೆ ಬಲಪಡಿಸುವುದು.
- ರೂ.100ಕೋಟಿ ಹಾಗೂ ಅಧಿಕ ಅನುದಾನ ಪಡೆದ ಎಲ್ಲಾ ಯೋಜನೆಗಳನ್ನುಕಡ್ಡಾಯವಾಗಿ ಮೌಲ್ಯಮಾಪನಕ್ಕೆಒಳಪಡಿಸುವುದು.
- 118ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ಒಂದೇ ರೀತಿಯ ಉದ್ದೇಶಗಳು ಇದ್ದರೆ ರಾಜ್ಯದ ಯೋಜನೆ ಸಮೀಕರಿಸುವುದು.
- ಫಲಿತಾಂಶ ಆಧಾರಿತ ಯೋಜನೆಗಳ ಮ್ಯಾಪಿಂಗ್ ಮಾಡುವುದು.
- ಒಂದು ಕೋಟಿಗಿಂತ ಕಡಿಮೆ ಇರುವ ಎಲ್ಲಾ ಯೋಜನೆಗಳನ್ನು ದೊಡ್ಡ ಯೋಜನೆಗಳೊಂದಿಗೆ ವಿಲೀನಗೊಳಿಸುವುದು.
- ಕೃಷಿ ಉತ್ಪಾದಕತೆಯಲ್ಲಿ ಹೆಚ್ಚಳವನ್ನು ಸಾಧಿಸಲು ರಾಜ್ಯ ವಲಯದ ಯೋಜನೆಗಳನ್ನು ಕೇಂದ್ರ ವಲಯ ಯೋಜನೆಗಳೊಂದಿಗೆ ವಿಲೀನಗೊಳಿಸಲಾಗುವುದು.
- ಕೇಂದ್ರ ಸರ್ಕಾರದ ಮಾದರಿಯಂತೆ ರಾಜ್ಯದ 1745 ಯೋಜನೆಗಳನ್ನು ಅಂಬ್ರೆಲಾ ಯೋಜನೆಗಳಿಗೆ ಸಮೀಕರಿಸುವುದು.
- ಕೇಂದ್ರ ಪುರಸ್ಕೃತ ಯೋಜನೆಗಳ ಪಾಲನ್ನು ಶೇ.8ಕ್ಕಿಂತ ಹೆಚ್ಚಿಸಲು ಕ್ರಮವಹಿಸುವುದು.

- ವನ ತೋಟಗಾರಿಕೆ ಯೋಜನೆಯಡಿ ಪರಿಸರವನ್ನು ಸಂರಕ್ಷಿಸಲು ರೈತರು ತಮ್ಮ ಭೂಮಿಯಲ್ಲಿ ಹಣ್ಣುಗಳು, ತೋಟಗಳು, ಉರುವಲು ಮೇವು ಹಾಗೂ ಕರಕುಶಲತೆಗೆ ಸಂಬಂಧಿಸಿದ ಗಿಡಗಳನ್ನು ಬೆಳೆಸಲು ಪ್ರೋತ್ಸಾಹಕ ಪ್ಯಾಕೇಜ್‌ಗಳನ್ನು ನೀಡಲು ಹಾಗೂ ವನತೋಟಗಾರಿಕೆ ಸಮಗ್ರ ಕೃಷಿ ವ್ಯವಸ್ಥೆಯ ಭಾಗವಾಗಿರಲು ಕ್ರಮವಹಿಸುವುದು.
- ಕೇಂದ್ರ ಸರ್ಕಾರದ ಕೌಶಲ್ಯಯೋಜನೆಯಡಿ **(NAPS)** ರೂ.**6090** ಕೋಟಿಗಳನ್ನುಪಡೆದು, (ರೂ.**7500 -** ತರಬೇತಿ + ಮಾಸಿಕ ರೂ.**1500 /24** ತಿಂಗಳಿಗೆ) **14** ಲಕ್ಷ ಯುವಕ ಯುವತಿಯರನ್ನುಕೈಗಾರಿಕಾ ಸಂಘಗಳ ಮೂಲಕ ಕೌಶಲ್ಯತೆ ತರಬೇತಿ (ಅಪ್ರೇಂಟಿಸ್‌ಶಿಪ್) ಮತ್ತು ನೇಮಕಾತಿ ನೀಡಬಹುದಾಗಿದೆ.
- ಪಿಪಿಪಿ ಮಾದರಿಯಲ್ಲಿ ರಾಜ್ಯಕ್ಕೆ ಒಂದು ಕೌಶಲ್ಯ ವಿಶ್ವವಿದ್ಯಾಲಯವನ್ನುಸ್ಥಾಪಿಸುವುದು.
- ಎಲ್ಲಾಶಾಲೆ/ಕಾಲೇಜು ಮಕ್ಕಳಿಗೆ **UNICEF – UNDP** ಮೂಲಕ ವೃತ್ತಿಮಾರ್ಗದರ್ಶನ ನೀಡುವುದು.
- ಪ್ರತಿಯೊಂದು ಗ್ರಾಮಪಂಚಾಯತ್‌ನಲ್ಲಿ ಒಂದರಿಂದ ಹತ್ತನೇ ತರಗತಿಯವರೆಗೆ ಒಂದು ಸ್ಮಾರ್ಟ್ **ಶಾ**ಲೆಯನ್ನುಸ್ಥಾಪಿಸಲಾಗುವುದು.
- ಮುಂಬೈ ಹಾಗು ದೆಹಲಿ ಮಾದರಿಯಲ್ಲಿ ಬೆಂಗಳುರು ಮಾನವ ಅಭಿವೃದ್ಧಿ ವರದಿ ಸಿದ್ಧಪಡಿಸುವುದು.
- ಸುಸ್ಥಿರ ಅಭಿವೃದ್ಧಿ ಗುರಿಗಳು ಸಾಧಿಸಲು ಹೊಸ ನೀತಿಗಳನ್ನು ರೂಪಿಸುವುದು. –ಕರ್ನಾಟಕ ರಾಜ್ಯ **ಪೋಷಣೆ** ನೀತಿ ಜಾನುವಾರು ಅಭಿವೃದ್ಧಿಗಾಗಿ ಸಮಗ್ರ ನೀತಿ ಕರ್ನಾಟಕ ಮೇವು ಭದ್ರತೆ ನೀತಿ, ಕರ್ನಾಟಕ ಸಮಗ್ರ ಕುರಿ ಮತ್ತುಮೇಕೆ ಬೆಳವಣಿಗೆನೀತಿ **ಹಾಗೂ** ನಗರೀಕರಣನೀತಿ
- ಕೌಶಲ್ಯಾಭಿವೃದ್ಧಿ –ಮಹಿಳೆಯರಿಗೆ ಆದ್ಯತೆ
- ಗ್ರಾಮಪಂಚಾಯತಿ ಮಟ್ಟದಲ್ಲಿ ರೈತರ ಉತ್ಪಾದಕ ಸಂಘಗಳು **ನೂ** ತನ ಮಾದರಿಯಲ್ಲಿಸ್ಥಾಪಿಸುವುದು
- ಸ್ಮಾರ್ಟ ಸಿಟಿ **ರೀತಿಯಲ್ಲಿ** ಸ್ಪಾಂಜ್ ಸಿಟಿ ಪರಿಕಲ್ಪನೆ ಬೆಳಸಬೇಕು.
- ನೀರಾವರಿ ಆಯೋಗ ಸ್ಥಾಪಿಸುವುದು.

## 49 ಲಕ್ಷ ಕುಟುಂಬಗಳಿಗೆ ಶೌಚಾಲಯ ನಿರ್ಮಾಣ : ಕೆ. ಈಶ್ವರಪ್ಪ

ಬೆಂಗಳೂರು, ಜನವರಿ 8 ( ಕರ್ನಾಟಕ ವಾರ್ತೆ): ಪ್ರಸ್ತುತ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಸುಮಾರ 49 ಲಕ್ಷ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದೆ ಎಂದು ಗ್ರಾಮಿಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಕೆ. ಎಸ್.ಈಶ್ವರಪ್ಪ ತಿಳಿಸಿದರು.

ಇಂದು ನಗರದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಪತ್ರಿಕಾ ಗೋಷ್ಠಿಯಲ್ಲಿ ಮಾತಾನಾಡಿ ಗ್ರಾಮಗಳು ಬಯಲು ಬಹಿರ್ದೆಸೆ ಮುಕ್ತವಾಗಿ, ಸ್ವಚ್ಛ ಸುಂದರ ಪರಿಸರ ನಿರ್ಮಾಣ ನಮ್ಮೆಲ್ಲರ ಗುರಿಯಾಗಿದೆ. ಶೌಚಾಲಯ ನಿರ್ಮಿಸಿ ಅವನ್ನು ಬಳಕೆ ಮಾಡುವಂತೆ ಗ್ರಾಮಸ್ಥರನ್ನು ಪ್ರೇರೇಪಿಸುವುದು ಬಹಳ ಮುಖ್ಯ ಎಂದು ಹೇಳಿದರು.

ಕೇಂದ್ರ ಸರ್ಕಾರ ಪ್ರತಿ ಶೌಚಾಲಯ ನಿರ್ಮಾಣಕ್ಕೆ ಈ ಹಿಂದೆ 4700 ರೂ.ಗಳನ್ನು ಪ್ರೋತ್ಸಾಹ ಧನವಾಗಿ ನೀಡುತ್ತಿದ್ದು, ಪ್ರಸ್ತುತ ಪ್ರಧಾನ ಮಂತ್ರಿಗಳು ಅದನ್ನು 12,000 ರೂ.ಗಳಿಗೆ ಏರಿಕೆ ಮಾಡಿದ್ದಾರೆ. ಪರಿಶಿಷ್ಟ ಜಾತಿ / ಪಂಗಡದವರಿಗೆ ಇದಕ್ಕಾಗಿ 15,000 ರೂ ನೀಡಲಾಗುತ್ತಿದೆ.

ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಯನ್ನು 3,491 ಗ್ರಾಮಪಂಚಾಯಿತಿಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ, ಇದಕ್ಕಾಗಿ 199.46 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ 683 ಗ್ರಾಮ ಪಂಚಾಯಿತಿಗಳಲ್ಲಿ ಘನ ತ್ಯಾಜ ನಿರ್ವಹಣೆ ಕಾರ್ಯ ಆರಂಭವಾಗಿದ್ದು, ಒಟ್ಟು 4466 ಗ್ರಾಮ ಪಂಚಾಯಿತಿಗಳಲ್ಲಿ ದ್ರವ ತ್ಯಾಜ್ಯ ನಿರ್ವಹಣೆಗಾಗಿ ಒಟ್ಟಾರೆ ರೂ. 821.40 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ 205.35 ಕೋಟಿಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ವಿವಿಧ ಜಿಲ್ಲೆಗಳ 16 ಸ್ಥಳಗಳಲ್ಲಿ ಮಲ ತ್ಯಾಜ ನಿರ್ವಹಣಾ ಘಟಕಗಳನ್ನು ಪ್ರಾಯೋಗಿಕವಾಗಿ ನಿರ್ಮಿಸಲು ಉದ್ದೇಶಿಸಲಾಗಿದೆ. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ ಗ್ರಾಮದ ಜನಸಂಖ್ಯೆಯ ಆಧಾರದ ಮೇಲೆ ದರ ನಿಗದಿ ಮಾಡಲಾಗಿದೆ ಎಂದರು.

ರಾಜ್ಯದ 6273 ಗ್ರಾಮ ಪಂಚಾಯಿತಿಗಳಿಗೆ 5 ಏಜೆನ್ಸಿಗಳ ಮೂಲಕ ಸೋಲಾರ್ ದೀಪಗಳನ್ನು ಅಳವಡಿಸಲು ಕ್ರಮಕೈಗೊಂಡಿದ್ದು, ಇದು ಒಂದು ವರ್ಷದೊಳಗೆ ಪೂರ್ಣಗೊಳ್ಳಲಿದೆ.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ 5,612 ಕಿ.ಮೀ ಉದ್ದದ ರಸ್ತೆಗಳನ್ನು ಹಂಚಿಕೆ ಮಾಡಲಾಗಿದೆ. ಮೊದಲನೇ ಹಂತದಲ್ಲಿ 3226.21 ಕಿ.ಮೀ ಉದ್ದದ 445 ರಸ್ತೆಗಳು ಹಾಗೂ 26 ಸೇತುವೆಗಳ ಅಭಿವೃದ್ಧಿ ಕಾಮಗಾರಿಗಳನ್ನು ರೂ. 2,169.72 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿ ಕಾಮಗಾರಿ ಪ್ರಗತಿಯಲ್ಲಿದೆ. 9-11-2020ರಲ್ಲಿ ಗ್ರಾಮ ಸಡಕ್ ಯೋಜನೆ 32ನೇ ಬ್ಯಾಚ್ 1 ಅಡಿ 321.93 ಕಿ.ಮೀ ಉದ್ದದ 50 ರಸ್ತೆ ಕಾಮಗಾರಿಗಳಿಗೆ ರೂ.214.69 ಕೋಟಿಗಳ ಮೊತ್ತವನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿದೆ. ಹಾಗೆಯೇ ಜನವರಿ 2021 ರಂದು ಬ್ಯಾಚ್ 2ರಡಿ 1879.81 ಕಿ.ಮೀ ಉದ್ದದ 302 ರಸ್ತೆ ಹಾಗೂ 75 ಸೇತುವೆ ಕಾಮಗಾರಿಗಳು ಒಳಗೊಂಡಂತೆ 1256.76 ಕೋಟಿಗಳ ಅಂದಾಜು ವೆಚ್ಚಕ್ಕೆ ಸರ್ಕಾರ ಅನುಮೋದಿಸಿದೆ. 2020-21ನೇ ಸಾಲಿನಲ್ಲಿ ಅನುಮೋದನೆಯಾದ ಒಟ್ಟಾರೆ ವೆಚ್ಚ 1471.45 ಕೋಟಿ ಎಂದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗ) ಯಡಿ ಈ ಮೊದಲು ಒಬ್ಬ ವ್ಯಕ್ತಿಗೆ ಒಂದು ವರ್ಷಕ್ಕೆ ನೀಡಲಾಗುತ್ತಿದ್ದ 100 ಮಾನವ ದಿನಗಳ ಕೂಲಿಯನ್ನು 150 ದಿನಗಳಿಗೆ ಏರಿಕೆ ಮಾಡಲಾಗಿದೆ. ಇದಕ್ಕೆ ಕೇಂದ್ರ 600 ಕೋಟಿ ಹೆಚ್ಚುವರಿಯಾಗಿ ನೀಡಲಾಗುತ್ತಿದೆ.

ಜಲ ಜೀವನ್ ಮಿಷನ್ ಮನೆ-ಮನೆಗೆ ಗಂಗೆ ಯೋಜನೆಯಡಿ ಗ್ರಾಮೀಣ ಕುಟುಂಬಗಳಿಗೆ ಸುರಕ್ಷಿತ ನಲ್ಲಿ ನಳ ಸಂಪರ್ಕ ಕಲ್ಪಿಸಲಾಗಿದ್ದು ಇದಕ್ಕಾಗಿಯೇ 1,30,000 ಕುಟುಂಬಗಳಿಗೆ ನೀರಿನ ಸಂಪರ್ಕ ಒದಗಿಸಲು ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಎಂದರು.

ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಚುನಾಯಿತರಾದ ಸದಸ್ಯರಿಗೆ ಜನವರಿ 19 ರಿಂದ ಮಾರ್ಚ್ 26ರ ವರೆಗೆ ಸಾಮರ್ಥ್ಯಾಭಿವೃದ್ಧಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಲಾಗಿದೆ.

ರಾಜ್ಯದ 5762 ಗ್ರಾಮಪಂಚಾಯಿತಿಗಳ 92,131 ಸದಸ್ಯರುಗಳಿಗೆ 5 ದಿನಗಳ ತರಬೇತಿಯನ್ನು 285 ತರಬೇತಿ ಕೇಂದ್ರಗಳ ಮೂಲಕ ಹಮ್ಮಿಕೊಳ್ಳಲಾಗಿದೆ. ಇದಕ್ಕೆ 27.16 ಕೋಟಿ ವೆಚ್ಚವಾಗಲಿದ್ದು ರಾಜ್ಯ ಹಾಗೂ ಕೇಂದ್ರ ಸರ್ಕಾರ 60:40 ಅನುಪಾತದಲ್ಲಿ ವೆಚ್ಚ ಭರಿಸುತ್ತಿದೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ 2 ದಿನಗಳ ಕಾರ್ಯಾಗಾರವನ್ನು ಇದೇಗ ಏರ್ಪಡಿಸಲಾಗಿದ್ದು

ಇದರಲ್ಲಿ ಸರ್ಕಾರದ ಮಟ್ಟದಲ್ಲಿ ಅನುಷ್ಠಾನಗೊಳ್ಳುವ ವಿವಿಧ ಯೋಜನೆಗಳ ಬಗ್ಗೆ ಚರ್ಚೆ, ಪ್ರಗತಿ ಪರಿಶೀಲನೆ ನಡೆಸಲಾಗುವುದೆಂದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಎಲ್.ಎ. ಅತೀಕ್ ಹಾಗೂ ಇಲಾಖೆಯ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

## 48ನೇ ವಾರ್ಷಿಕ ಕಲಾಪ್ರದರ್ಶನ ಹಾಗೂ 2019ನೇ ಸಾಲಿನ ಗೌರವ ಪ್ರಶಸ್ತಿ ಪ್ರಧಾನ ಸಮಾರಂಭ

ಬೆಂಗಳೂರು, ಡಿಸೆಂಬರ್ 08 (ಕರ್ನಾಟಕ ವಾರ್ತೆ):

ಯಾವುದೇ ಕ್ಷೇತ್ರದಲ್ಲಿ ನಾವು ಮಾಡುವ ಕೆಲಸದಿಂದ ಗೌರವ ಪ್ರಶಸ್ತಿಗಳು ಬರುತ್ತದೆ. ಸಾಧನೆಗೆ ತಕ್ಕಂತೆ ಫಲ ದೊರೆಯುತ್ತದೆ. ಪ್ರಕೃತಿಯ ಸ್ಫೂರ್ತಿಯನ್ನು ಪಡೆದು ಅನುಭವಿಸಿ ಬರೆಯುವುದೇ ಕಲೆ. ಅನುಭವವೇ ಒಂದು ದೊಡ್ಡ ಪಾಠ. ಅದಕ್ಕೆ ಎಂದೂ ಅಂತ್ಯವಿಲ್ಲ ಎಂದು ಹಿರಿಯ ಕಲಾವಿದರಾದ ಡಾ.ಬಿ.ಕೆ.ಎಸ್. ವರ್ಮ ತಿಳಿಸಿದರು

ಅವರು ಇಂದು ಕರ್ನಾಟಕ ಲಲಿತಾಕಲಾ ಅಕಾಡೆಮಿ ವೆಂಕಪ್ಪ ಆರ್ಟ್ ಗ್ಯಾಲರಿಯಲ್ಲಿ ಹಮ್ಮಿಕೊಳ್ಳಲಾದ 48 ನೇ ವಾರ್ಷಿಕ ಕಲಾಪ್ರದರ್ಶನ ಹಾಗೂ 2019ನೇ ಸಾಲಿನ ಗೌರವ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಕಲಾಗ್ರಾಮದಲ್ಲಿ ತಳಮಟ್ಟದ ಕಲಾವಿದರಿಗೆ ಯೋಜನೆ ರೂಪಿಸಬೇಕು ಎಂದು ಲಲಿತಾಕಲಾ ಅಕಾಡೆಮಿಯ ಅಧ್ಯಕ್ಷರಾದ ಮಹೇಂದ್ರ ಅವರು ತಿಳಿಸಿದರು.

ಅಕಾಡೆಮಿಯ ಚಟುವಟಿಕೆಗಳನ್ನು ಉತ್ಸಾಹಭರಿತವಾಗಿ ಹಾಗೂ ರಚನಾತ್ಮಕವಾಗಿ ನಡೆಸಲು ಮುಂದಿನ ಹಲವು ಹೆಜ್ಜೆಗಳನ್ನು ಇರಿಸಿದ್ದೇವೆ. ಕಲಾವಿದರಿಗೆ ಹೊಸ ಸಾಧ್ಯತೆಗಳ ಮೂಲಕ ವಿವಿಧ ಅವಕಾಶಗಳನ್ನು ಗುರುತಿಸುವುದು ಹಾಗೂ ಅಗತ್ಯವಿರುವ ಕಾರ್ಯವಿಧಾನಗಳ ಮತ್ತು ರೂಪುರೇಷೆಗಳನ್ನು ಅಭಿವೃದ್ದಿಪಡಿಸುವುದು ನಮ್ಮ ಉದ್ದೇಶವಾಗಿದೆ ಎಂದು ಅಧ್ಯಕ್ಷರು ನುಡಿದರು.

2019ನೇ ಸಾಲಿನ ಗೌರವ ಪ್ರಶಸ್ತಿಗೆ ದಾವಣಗೆರೆಯ ಬಿ.ಆರ್. ಕೊರ್ತಿ, ಉತ್ತರ ಕನ್ನಡ ಜಿಲ್ಲೆಯ ಜಿ.ಎಂ. ಹೆಗಡೆ, ಕಲಬುರಗಿಯ ಪ್ರಕಾಶ ಗಡ್ಕರ್ ಅವರು ಭಾಜನರಾಗಿದ್ದಾರೆ. ಪ್ರಶಸ್ತಿಗೆ ಭಾಜನರಾದವನ್ನು ಹಿರಿಯ ಕವಿಗಳಾದ ನಾಡೋಜ ಸಿದ್ದಲಿಂಗಯ್ಯ ಪ್ರಶಸ್ತಿಯನ್ನು ವಿತರಿಸಿದರು.

ಪ್ರಶಸ್ತಿಯನ್ನು ವಿತರಿಸಿ ಮಾತನಾಡಿದ ಹಿರಿಯ ಕವಿ, ನಾಡೋಜ ಡಾ: ಸಿದ್ದಲಿಂಗಯ್ಯ ಅವರು ಜಗತ್ತಿನ ಎಲ್ಲಾ ಧರ್ಮಗಳಿಗೂ ಪುರಾಣ ಇದೆ. ಹಿಂದೂ ಧರ್ಮದಲ್ಲಿ ಹೆಚ್ಚಾಗಿ ಇದೆ. ಚಿತ್ರಕಲೆಯಲ್ಲಿ ಚಿತ್ರಕಲಾವಿದರು  ಪುರಾಣಗಳ ಅಲೌಕಿಕ ಸತ್ಯವನ್ನು  ಹಾಗೂ ಸುಂದರವಾದ ಪ್ರಕೃತಿಯ ಸೌಂದರ್ಯವನ್ನು ಅತಿಸುಂದರವಾಗಿ, ವೈವಿಧ್ಯಮಯವಾಗಿ ಚಿತ್ರಿಸುತ್ತಾರೆ. ಬಣ್ಣ ಹಾಗೂ ಗೆರೆಗೆ ದೈವಿಕತೆ ತಂದವರು ಚಿತ್ರಕಲಾವಿದರು. ಅದು ಕೇವಲ ಚಿತ್ರವೆನಿಸದೆ ನಮ್ಮನ್ನು ಅದು ಕೈಮುಗಿಯುವಂತೆ ಪ್ರೇರೇಪಿಸುತ್ತದೆ. ದೈವಿಕತೆ, ಪವಿತ್ರತೆಯ ಶಕ್ತಿಯು ಚಿತ್ರಕ್ಕಿದೆ. ಚಿತ್ರಕಲಾವಿದರ ಬಗ್ಗೆ ಅಪಾರವಾದ ಗೌರವವಿದೆ. ಕಲೆಯ ಬಗ್ಗೆ ಆಸಕ್ತಿ, ವೀಕ್ಷಣೆಯಿಂದ ಸಂತೋಷಪಡುವ ಪ್ರವತ್ತಿ ಇದೆ ಎಂದು ಹೇಳಿದರು.

48ನೇ ವಾರ್ಷಿಕ ಕಲಾಪ್ರದರ್ಶನದಲ್ಲಿ  ಬೆಂಗಳೂರಿನ ಗಣೇಶ್ ಪಿ. ದೊಡ್ಡಮನಿ, ಬಾಗಲಕೋಟೆಯ ವಿನಾಯಕ ರಾ. ಚಿಕ್ಕೋಡಿ, ಬೀದರ್‌ನ ಓಂಕಾರ ಕಲ್ಲಪ್ಪ ಮೇತ್ರೆ, ಬಾಗಲಕೋಟೆಯ ವಿನಾಯಕ ಎನ್. ಹೊಸೂರ, ಬೆಂಗಳೂರಿನ ವಿಜಯ್ ಎಸ್. ನಾಗವೇಕರ್, ತುಮಕೂರಿನ ಕೆ.ಎಸ್. ಬಸವರಾಜು, ಧಾರವಾಡದ ಭರತ್ ಎಂ. ಲದ್ದಿಯವರ, ಚಿಕ್ಕಮಂಗಳೂರಿನ ಲಿಂಗರಾಜು ಎಂ.ಎಸ್. ಬೆಂಗಳೂರಿನ ಶಿವಕಾಂತ ಶೇಖರ್, ಕಲಬುರಗಿಯ ತಿಪ್ಪಣ್ಣ ಎಸ್. ಪೂಜಾರಿ ಬಹುಮಾನ ವಿಜೇತರಾಗಿದ್ದರೆ.

ವಾರ್ಷಿಕ ಕಲಾಪ್ರದರ್ಶನ ದಿನಾಂಕ 08-01-2021 ರಿಂದ 12-01-2021 ರವರೆಗೆ ಬೆಳಿಗ್ಗೆ 11-00 ರಿಂದ ಸಂಜೆ 07-00ರವರೆಗೆ ಸಾರ್ವಜನಿಕರ ವೀಕ್ಷಣೆಗೆ ತೆರೆದಿರುತ್ತದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಬಸವರಾಜ ಹೂಗಾರ, ಅಕಾಡೆಮಿಯ ಸದಸ್ಯರು  ಹಾಗೂ ಹಲವು ಗಣ್ಯರು ಉಪಸ್ಥಿತರಿದ್ದರು.

## ಹಕ್ಕಿಜ್ವರ ಉನ್ನತ ಮಟ್ಟದ ಸಭೆ

**ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):**

ರಾಜ್ಯದಲ್ಲಿ ಹಕ್ಕಿ ಜ್ವರ ಪ್ರಕರಣಗಳು ವರದಿಯಾಗಿಲ್ಲ, ಆದರೂ ನೆರೆರಾಜ್ಯ ಕೇರಳದಲ್ಲಿ ಹಕ್ಕಿ ಜ್ವರ ವರದಿಯಾಗಿರುವ ಹಿನ್ನಲೆಯಲ್ಲಿ ಮುನ್ನೆಚ್ಚರಿಕೆ ಅಗತ್ಯವಿದ್ದು  ಗಡಿ ಜಿಲ್ಲೆಗಳಲ್ಲಿ ಕಟ್ಟೆಚ್ಚರಿಕೆ ವಹಿಸಲು ವಿವಿಧ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು  ಪಶು ವೈದ್ಯಕೀಯ ಸಚಿವ ಪ್ರಭುಚವ್ಹಾಣ್ ಹೇಳಿದರು.

ಅವರು ಇಂದು ರಾಜ್ಯ ಮಟ್ಟದ ಕೋಳಿ ಶೀತ ಜ್ವರ /ಹಕ್ಕಿ ಜ್ವರದ ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷತೆ ವಹಿಸಿ ಜೂಮ್ ಮೂಲಕ ಸಭೆ ನಡೆಸಿದರು.  ರಾಜ್ಯದಲ್ಲಿ ಹಕ್ಕಿ ಜ್ವರ ಹರಡದಂತೆ  ಎಲ್ಲಾ ಮುನ್ನೆಚ್ಚರಿಕೆಗಳನ್ನು ವಹಿಸಲಾಗಿದ್ದು, ಗಡಿ ಭಾಗಗಳಾದ ಚಾಮರಾಜ ನಗರ, ಮೈಸೂರು, ಮಡಿಕೇರಿ, ದಕ್ಷಿಣ ಕನ್ನಡಗಳಿಗೆ ಬರುವ ಸಾಗಾಣಿಕ ವಾಹನಗಳನ್ನು ಸ್ಯಾನಿಟೈಸ್ ಮಾಡಿಸುವ ಅರಿವು ಮೂಡಿಸಿ ಎಂದರು.

ಅಂತರರಾಜ್ಯ ನಿರ್ಬಂಧಗಳಿಗೆ ಅವಕಾಶವಿಲ್ಲ.  ಆದರೆ, ಈ ಸಂಬಂಧ ಕೇಂದ್ರ ಸರ್ಕಾರ ಹೊರಡಿಸಿರುವ ಮಾರ್ಗಸೂಚಿ ಮತ್ತು ಶಿಷ್ಟಾಚಾರಗಳನ್ನು ಕಡ್ಡಾಯವಾಗಿ ಪಾಲಿಸಿ.  ನಮ್ಮಲ್ಲಿ  ಪೌಲ್ಟ್ರಿ ಮತ್ತು ಮೊಟ್ಟೆಗಳ ಸೇವನೆ ಸುರಕ್ಷಿತವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಮಾಂಸ ಮತ್ತು ಮೊಟ್ಟೆಯನ್ನು ಚೆನ್ನಾಗಿ ಬೇಯಿಸಿ ತಿನ್ನುವ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡಿ. ಸುಳ್ಳು ಸುದ್ದಿಗಳು ಹರಡದಂತೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಹೇಳಿದರು.

ಹಕ್ಕಿಗಳ ಸಾವು ವರದಿಯಾದರೆ ತಕ್ಷಣ ಪರಿಶೀಲನೆ ನಡೆಸಿ ವರದಿ ಲಭ್ಯವಾಗಬೇಕು. ಪೂರ್ವಸಿದ್ಧತೆಯೊಂದಿಗೆ ಫೀಲ್ಡ್ ನಲ್ಲಿರುವ ಸಿಬ್ಬಂದಿ ಮತ್ತು ಅಧಿಕಾರಿಗಳು ಪರಿಸ್ಥಿತಿಯನ್ನು ನಿಭಾಯಿಸಲು ಸಜ್ಜಾಗಿರಬೇಕೆಂದು ಸೂಚಿಸಿದರು.

ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿ, ಪ್ರಧಾನ ಕಾರ್ಯದರ್ಶಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಪ್ರಧಾನ ಕಾರ್ಯದರ್ಶಿ ಗೃಹ ಮತ್ತು ಸಾರಿಗೆ, ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕಂದಾಯ, ಆರ್ಥಿಕ ಇಲಾಖೆ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು.

## Access to justice for all

Bengaluru, January 08 (Karnataka Information)

**"Access to justice for all"** is the vision of Legal Services in India. The Karnataka State Legal Services Authority (KSLSA) is established with the noble object of providing free and competent

legal services to the weaker sections of the society and to ensure that justice is not denied to any citizen by reason of economic or other disabilities and to organise Lok Adalats and to secure that the operations of the legal system promotes justice on the basis of equal opportunity. Equal opportunity irrespective of caste, creed or religion and the likes are treated alike. Apart from providing legal assistance through the Legal Aid Clinics and court based legal aid through the panel advocates, many other innovative programmes are on the board of KSLSA. Brief description is provided here under:

- **Report with regard to Implementation of NALSA Schemes:**

  To meet the vision of Legal Services in India, National Legal Services Authority (NALSA) has evolved as many as 11 Schemes for meeting its statutory obligation of providing legal aid, spreading legal literacy and legal awareness amongst the public. In the State of Karnataka, under the most able guidance of **Hon'ble Sri. Justice Abhay Shreeniwas Oka, Chief Justice, High Court of Karnataka** and Patron-in-chief of KSLSA; and motivation of **Hon’ble Sri. Justice Aravind Kumar, Judge, High Court of Karnataka** and Executive Chairman, KSLSA in the year 2020 altogether 8 Schemes have been taken up for implementation. Inspite of surge of COVID-19 Pandemic in the State of Karnataka, KSLSA has proceeded in its task to implement the NALSA Schemes in the best

possible way. Following are the impact of the NALSA Schemes implementation in the State of Karnataka:

- Due to the pandemic it was practically difficult to undertake ground level work. Nevertheless, several innovative ideas have been evolved to implement NALSA (Para-Legal Volunteers (Revised) Scheme Module for the orientation-Induction-Refresher Courses for PLV Training. As per the directions issued by KSLSA in the entire State of Karnataka totally 4332 PLVs have been selected and efforts are being made to develop a revised module for their training. It must be creditworthy to note here that during the pandemic situation in the State, totally 522 PLVs joined hands with 257 Panel Advocates as Legal Services Officers to inspect Covid Care Centers and ensure that proper facilities are provided to the needy.

- During the meeting of NALSA (Effective Implementation of Poverty Alleviation Schemes) Scheme, 2015 it was resolved to involve newly enrolled Advocates who receive stipends from the Government in the legal services. Accordingly, as per the directions of designated Former High Court Judge, Hon'ble Sri Justice A.N.Venugopala Gowda, a letter was addressed to the State Government by KSLSA. Resultantly on 17.11.2020 a circular is issued by the Government of Karnataka directing all the Advocates who receive stipends from any department to involve themselves in the work of

Legal Services Institutions. This, response of Government of Karnataka which is one of the fruit of NALSA Scheme implementation, would not only motivate the young advocates to work for pro-bono cause, but also will benefit the marginalized sections of society.

- During the meeting of NALSA (Legal Services to the Mentally Ill and Mentally Disabled Persons) Scheme, 2015 chaired by Hon'ble Sri Justice K.N. Phaneendra, Former Judge, High Court of Karnataka, it was pointed out that as per Section 74 of The Mental Health Care Act, 2017 Committee is not formed and as such it was directed to form an ad-hoc district level committee consisting of one District Judge, CEO, DHO/District Surgeon, SP and NGO's working for said cause. Accordingly as per the letter issued by KSLSA all the DLSA's in the State of Karnataka have formed ad-hoc district level committee for effective implementation of the Scheme.

- Further, in respect of NALSA (Legal Services to the Mentally Ill and Mentally Disabled Persons) Scheme, 2015 totally 6 webinars have been conducted to all stake holders namely, District Judges, Special Court Judges, Police Officers, CDPO's, NGO's etc., on the topic Mental Health Care Act, 2017 and the Rights of Persons with Disability Act, 2016. All the said webinars have created sufficient awareness

amongst the stakeholders. During the webinars few ground level problems have come to light such as lack of scheme for Care givers of Disabled/Mentally ill person etc., and it has been noted down by KSLSA and necessary steps will be taken up in the due course.

- Webinar was conducted for training 32 Judges of the Special Courts constituted under the Rights of Persons with Disability Act 2016. As the said Special Court judges had no information with regard to the Indian Sign Language Interpreters, KSLSA has made efforts to obtain said information and forwarded it to all the Special Judges under the Act.

- During the meeting on NALSA (Legal Services to Senior Citizens) Scheme, 2016 chaired by Hon'ble Sri Justice Ashok B. Hinchigeri, Former Judge, High Court of Karnataka it was pointed out that Rule 21 of the Karnataka Maintenance of Welfare of Parents and Senior Citizens Rules, 2009 is not properly implemented. As such it was resolved to direct the DG & IGP of Karnataka to comply the provision of Law. Further the jurisdictional Magistrates are directed to monitor the work done by the Police Stations and submit periodical report to KSLSA. As per the said direction DG & IGP has issued standing order to the concerned Police Stations and filed his compliance report.

- During the meeting on NALSA (Victims of Trafficking and Commercial Sexual Exploitation Scheme, 2015 and NALSA (Child Friendly Legal Services to Children and their Protection) Scheme, 2015 headed by Judge Hon'ble Sri Justice Ajith J. Gunjal, Former Judge, High Court of Karnataka, it was pointed out that special Juvenile Police Unit is not properly constituted in the State of Karnataka as per Sec. 107 of Juvenile Justice (Care & Protection of Children) Act, 2015. Hence, concerned Department is directed to properly constitute the units so that child rights are protected.

- Hon'ble Sri. Justice A.V. Chandrashekar who is heading the NALSA (Legal services to the workers in the Unorganized Sector) Scheme during the meetings issued direction to the concerned departments to act swiftly during the period of pandemic, to reach the government schemes to the workers of unorganised sector. Due to the efforts of which, in Karnataka total sum of Rs.58.697 crores was disbursed through Direct Debit Transfer in 5 stages to the account of washer men and hair dressers. Further, the committee had also recommended for taking immediate action in respect of other categories of unorganised sector as well.

- **KALSA as an instrumentality of Hon'ble High Court of Karnataka in Writ Petitions**

    - During the time of Covid-19 Pandemic a novel imitative was taken up as per the directions of Hon'ble High Court of Karnataka in **W.P.No.6435/2020** in the form of constituting State Level Monitoring Committee to monitor the work done by the Government Agencies dealing with Covid-19. Hon'ble Sri Justice A.N. Venugopala Gowda, Hon'ble Sri Justice K.N. Keshavanarayana, former Judges of High Court of Karnataka headed the said committee along with one former IAS officer Sri. V.P. Baligar and one former IPS officer Sri. S.T.Ramesh. The said State Level Monitoring Committee held several meetings and passed resolutions. The committee resolved to direct inspection of COVID-19 Centres and hospitals and to suggest measures in the matter of effective implementation of Central and State Government Schemes so that it could reach the ultimate beneficiaries. State Level Monitoring Committee meeting had resolved to direct the State Government in various aspects to combat the evil of pandemic. Most of the resolutions have been complied by the concerned Government Departments and they have file their compliance report. The Department of

Health and Family Welfare Services have taken steps to form Resident Welfare Associations in various wards of Bengaluru City. In the District as well villages, Task Force Committees were formed to assist the needy. Further four State Level Committees were constituted to co-ordinate and monitor the working of on field Committees on all Districts. Hence, KSLSA has contributed in helping the affected section of Society during the COVID-19 pandemic.

- Hon'ble High Court of Karnataka in **W.P. No. 10096/2020** had directed State Government and BBMP to come out with a Scheme for identification of Children who are forced to sell toys, flowers etc., in the City of Bengaluru. When the said authorities failed to act in time, Hon'ble High Court of Karnataka directed to implead Karnataka State Legal Services Authority as a party Respondent and entrusted the task of framing above referred scheme. After deliberation with all the stakeholders, including NGOs on 22.12.2020 Karnataka State Legal Services Authority submitted detailed "Scheme for Identification, Protection and Restoration/Rehabilitation of Vulnerable Children". If the said Scheme is effectively implemented, it

would prevent the menace of Child hawking and Child begging in the Streets of Bengaluru.

- Hon'ble High Court of Karnataka in **W.P. No.42927/2015** had directed KSLSA to submit a detailed report with regard to the potholes in the BBMP roads. Accordingly on 25.10.2018 a detailed Commission Report was submitted by the then Member Secretary of KSLSA. On the basis of said report, Hon'ble High Court had directed the BBMP officials to carry out necessary repair work. Resultantly the BBMP officials had taken up steps for repair and proper construction of the road. At present once again Hon'ble High Court of Karnataka has directed KSLSA to conduct inspection of BBMP road condition. In this regard it is necessary to bring to the knowledge of general public with regard to the guidelines formulated by the BBMP which is submitted before Hon'ble High Court of Karnataka. The said guideline provides for the right to receive compensation in case of death, compound injuries sustained due to the pothole/poor conditions of the road and footpaths.

- Recently, KSLSA filed a Public Interest Litigation In **WP No.9367/2020(PIL)**. In that case, Mangalore City

Corporation and District Administration had failed to handle waste management in a village called Pachanday near Mangalore. Due to that vast agricultural land (77.93 acre) was used as dumping yard for several decades, which ultimately resulted in air pollution, water pollution and environmental pollution. The resident public had approached DLSA Mangalore seeking legal aid to get redressal. The said matter is taken up by KSLSA to fight for justice of rural and marginalised sections of society.

- **Organizing Lok Adalats -**

Lok Adalats have become an important instrument for deciding the disputes / cases with a sense of finality and to the satisfaction of the disputing parties. Due to Covid-19 Pandemic National Legal Services Authority, had cancelled the periodical National Lok Adalats scheduled to be held on 11.04.2020, 11.07.2020 and 12.09.2020. However the State Legal Services Authorities were permitted to organise Lok-Adalats at micro level. Considering the fact that due to the Covid-19 pandemic the regular Courts were unable to take up the cases for hearing, KSLSA got arranged E-Lok Adalat on 19.09.2020 and Mega Lok Adalat on 19.12.2020 throughout the State of Karnataka. Bothe the said Lok Adalats received an overwhelming response from the litigant public and it turned out to be a grand success. In the E-Lok Adalat held on 19.09.2020, altogether **1,15,938** cases were settled throughout

the State. The total amount settled in the E-Lok Adalat was Rs.357,71,94,758/-.

In the Mega Lok Adalat held on 19.12.2020 which was a mixture of physical as well as E-Lok Adalat witnessed settlement of altogether **2,63,215** cases throughout the State. The total amount settled in the said Lok Adalat was Rs.702,16,24,927/-. It is creditworthy to note that alltogether 3099 partition suits were settled throughout the State of Karnataka.

**To sum up,** the implementation of NALSA Scheme in the State of Karnataka has sensitized the entire Government machinery and has ultimately helped the weaker and marginalised sections of society. The efforts of KSLSA to implement the NALSA Schemes in its true letter and spirit would endure until its optimization. KSLSA is monitoring the activities of legal services institution in the State level. Whereas there are 30 District Legal Service Authorities (DLSA's) and 149 Taluka Legal Service Committees (TLSC's) at the district and taluka levels respectively. Apart from that there is 24x7 dedicated free help line No-1800-425-90900, for any kind of legal advices and queries. For the implementation of NALSA Schemes in the State, KSLSA is well guided by 7 former judges of Hon'ble High Court of Karnataka. Further, KSLSA is motivated by **Hon'ble Sri. Justice Abhay Shreeniwas Oka, Chief Justice, High Court of Karnataka** and Patron-in-chief of KSLSA; and

**Hon'ble Sri. Justice Aravind Kumar, Judge, High Court of Karnataka** and Executive Chairman, KSLSA in this direction. The endeavour of KSLSA is to ensure free and competent legal service reaches the last member of the society and thereby vision of legal services institution is achieved.

## ಕರ್ನಾಟಕ ನಾಟಕ ಅಕಾಡೆಮಿ 2019ನೇ ಸಾಲಿನ ಪ್ರಶಸ್ತಿ ಪ್ರದಾನ ಸಮಾರಂಭ

**ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):**

2019–2020ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಸಮಾರಂಭ ತುಮಕೂರಿನ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ದಿನಾಂಕ 09–01–2021ರ ಶನಿವಾರದಂದು ಬೆ. 11.00 ಕ್ಕೆ ಏರ್ಪಡಿಸಲಾಗಿದೆ. ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಜೆ. ಸಿ. ಮಾದುಸ್ವಾಮಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

## ಸಚಿವರ ಪ್ರವಾಸ

**ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):**

ವಸತಿ ಸಚಿವ ವಿ. ಸೋಮಣ್ಣ ಅವರು ಜನವರಿ 10 ರಿಂದ 14 ರವರೆಗೆ ಬೆಳಗಾವಿ, ಬಾಗಲಕೋಟೆ, ವಿಜಯಪುರ, ಗದಗ, ಧಾರವಾಡ ಹಾಗೂ ದಾವಣಗೆರೆ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಜನವರಿ 14 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಸಚಿವರ ಪ್ರವಾಸ

**ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಜನವರಿ 11 ಮತ್ತು 12 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಜನವರಿ 12 ರಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಜನವರಿ 08 (ಕರ್ನಾಟಕ ವಾರ್ತೆ):**

ಶ್ರೀ ಜಯಚಾಮರಾಜೇಂದ್ರ (ಕಬ್ಬನ್‌ಪಾರ್ಕ್) ಉದ್ಯಾನವನ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ತೋಟಗಾರಿಕೆ ನಿರ್ದೇಶಕರ ಸೂಚನೆಯಂತೆ ಜನವರಿ 10 ರ ಭಾನುವಾರದಂದು ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಬಳಿಯಲ್ಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಕೋರಿದೆ.

ಬೆಳಿಗ್ಗೆ 6–30 ಗಂಟೆಯಿಂದ 7–30 ಗಂಟೆಯವರೆಗೆ ಬ್ಯಾಂಡ್ ಸ್ಟಾಂಡ್ ಆವರಣದಲ್ಲಿ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆಯ ಭಾಲಭವನ ಸೊಸೈಟಿ, ಬೆಂಗಳೂರು ಅವರು ಸಹಯೋಗದೊಂದಿಗೆ ನೃತ್ಯದರ್ಶಿನಿ ಟ್ರಸ್ಟ್, ಬೆಂಗಳೂರು ಕುಮಾರಿ ಧನ್ಯ, ಜಿ.ಆರ್. ಮತ್ತು ತಂಡ, ಕುಮಾರಿ ಸಹಸ್ರ ಪೂಜಿತ ಎಂ. ಹಾಗೂ ನಾಟ್ಯ ತರಂಗ ನೃತ್ಯಾಲಯ, ಬೆಂಗಳೂರು ಕುಮಾರಿ ತನ್ನವಿ ಮತ್ತು ತಂಡದವರಿಂದ ಭರತನಾಟ್ಯ ಹಾಗೂ ಸಮುಹ ನೃತ್ಯ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಬೆಳಿಗ್ಗೆ 8–00 ಗಂಟೆಯಿಂದ 9–00 ಗಂಟೆಯವರೆಗೆ ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಬಳಿಯಲ್ಲಿನ ಪ್ರದೇಶದಲ್ಲಿ ತೋಟಗಾರಿಕೆ ಇಲಾಖೆ ವತಿಯಿಂದ ಉದ್ಯಾನವನಕ್ಕೆ ಆಗಮಿಸುವ ವಾಯು ವಿಹಾರಿಗಳು, ಸಾರ್ವಜನಿಕರಿಗಾಗಿ ಮನೆಯಲ್ಲಿ ಸುಲಭವಾಗಿ ಬೆಳೆಸಬಹುದಾದ ಹಾಗೂ ಆರೋಗ್ಯ ವೃದ್ಧದಿಗಾಗಿ ಉಪಯೋಗಿಸುವಂತೆಹ ಔಷಧೀಯ ಸಸ್ಯಗಳ ಕುರಿತು ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿಶೇಷ ಸೂಚನೆ : ಸಾಂಸ್ಕೃತಿಕ ಕಾರ್ಯಕ್ರಮ, ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಕೋವಿಡ್ –19 ನಿಯಮವನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಗುಣಮಟ್ಟದರೇಷ್ಮೆ ಮಾರಾಟಕ್ಕೆ ಮಂಡಳಿಯಿಂದ ವಿನೂತನಯೋಜನೆ : ಸವಿತಾ ವಿ.ಅಮರಶೆಟ್ಟಿ

ಬೆಂಗಳೂರು 08: ಕರ್ನಾಟಕ ರಾಜ್ಯ ರೇಷ್ಮೆ ಉತ್ಪಾದನೆಯಲ್ಲಿ ಜಗತ್ತಿನಲ್ಲಿಯೇ ವಿಶ್ವವಿಖ್ಯಾತಿ ಪಡೆದಿದ್ದು, ಗುಣಮಟ್ಟದ ರೇಷ್ಮೆ ತಯಾರಿಕೆಯಲ್ಲಿ ಮಂಚೂಣಿಯಲ್ಲಿದೆ ಎಂದು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಅಧ್ಯಕ್ಷೆ ಶ್ರೀಮತಿ ಸವಿತಾ ವಿ.ಅಮರಶೆಟ್ಟಿ ಹೇಳಿದರು.

ಬೆಂಗಳೂರಿನ ಕಬ್ಬನ್‌ಪೇಟೆಯಲ್ಲಿರುವ ನಿಗಮದ ಕಛೇರಿ, ಕೇಂದ್ರ ಉಗ್ರಾಣಕ್ಕೆ ದಿಢೀರ್ ಬೇಟಿ ನೀಡಿ, ಅಲ್ಲಿನ ಸಿಬ್ಬಂದಿ ಹಾಗೂ ರೇಷ್ಮೆ ವರ್ತಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಹಲವು ಕಷ್ಟ ಸಂಕಷ್ಟಗಳ ಮಧ್ಯಯುರಾಜ್ಯದಲ್ಲಿ ಉತ್ತಮಗುಣಮಟ್ಟದ ರೇಷ್ಮೆ ಬೆಳೆಯಲಾಗುತ್ತಿದ್ದು, ರೇಷ್ಮೆ ಬೆಳೆಗಾರರಿಗೆ ಉತ್ತಮ ಮಾರುಕಟ್ಟೆ ಒದಗಿಸಲು ರೇಷ್ಮೆ ಮಾರಾಟ ಮಂಡಳಿ ಹಲವು ವಿನೂತನ ಯೋಜನೆಜಾರಿಗೆ ಮಾಡಲು ಚಿಂತನೆ ನಡೆಸುತ್ತಿದೆ. ಉತ್ತಮ ಗುಣಮಟ್ಟದ ರೇಷ್ಮೆಗೆ ವ್ಯಾಪಕ ಬೇಡಿಕೆಯಿದ್ದು, ಈ ನಿಟ್ಟಿನಲ್ಲಿ ರೇಷ್ಮೆ ಬೆಳೆಗಾರರು ಗುಣಮಟ್ಟದರೇಷ್ಮೆ ಬೆಳೆಗೆ ಆಧ್ಯತೆ ನೀಡಿ ಬೆಳೆಗಾರರ ಆದಾಯವನ್ನು ದ್ವಿಗುಣಗೊಳಿಸುವ ಭಾರತದ ಪ್ರಧಾನಿಯಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ರವರ ಹಾಗೂ ಮಾನ್ಯ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪರವರ ಕನಸು ನನಸಾಗಿಸುವತ್ತ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ದಿಟ್ಟ ಹೆಜ್ಜೆ ಇಟ್ಟಿದೆ ಎಂದರು.

ಇದೇ ವೇಳೆಯಲ್ಲಿ ಅಲ್ಲಿನ ಅಧಿಕಾರಿ ವರ್ಗ ಮತ್ತು ಸಿಬ್ಬಂದಿ ವರ್ಗದವರ ಹಾಜರಾತಿ ಪುಸ್ತಕವನ್ನು ಪರಿಶೀಲಿಸಿ, ನಿಗಮದ ಎಲ್ಲಾ ಅಧಿಕಾರಿ ವರ್ಗ ಮತ್ತು ಸಿಬ್ಬಂದಿ ವರ್ಗದವರಿಗೆ ಸಮಯಕ್ಕೆ ಸರಿಯಾಗಿ ಕಛೇರಿಗಳಿಗೆ ಆಗಮಿಸಿ ಶಿಸ್ತಿನಿಂದ ಕರ್ತವ್ಯ ನಿರ್ವಹಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಕೇಂದ್ರಉಗ್ರಾಣದಲ್ಲಿ ಶೇಖರಣೆ ಮಾಡಿರುವ ರೇಷ್ಮೆದಾಸ್ತಾನನ್ನು ತಾವೇ ಖುದ್ದು ಪರಿಶೀಲಿಸಿ, ಅಲ್ಲಿನ ಮಾರಾಟ ವಹಿವಾಟುಗಳ ವಿವರಗಳನ್ನು ಪಡೆದು ಮಾರುಕಟ್ಟೆದರದಲ್ಲಿ ರೇಷ್ಮೆಯನ್ನು ಮಾರಾಟ ಮಾಡುವ ಬಗ್ಗೆ ತಿಳಿಸಿದರು.

## Programme of 16th PBD Convention

## 09th January 2021 : Venue – Virtual

| Time | Programme |
|---|---|
| 1005-1105 hrs | **Inaugural Session** |
| | • Welcome Remarks by External Affairs Minister, Dr. S. Jaishankar. |
| | • Keynote Address by Chief Guest H.E. Mr. Chandrikapersad Santokhi, President of Suriname. |
| 1030 hrs | • **Address by Shri Narendra Modi, Hon'ble Prime Minister of India.** |
| | • Announcement of "Bharat Ko Janiye Quiz" Awards. |
| 1115–1455 hrs | **Plenary Sessions** |
| | • **Session I - "Role of Diaspora in Aatmanirbhar Bharat"**<br>Address by External Affairs Minister, Dr. S. Jaishankar,<br>Address by Commerce & Industry Minister, Shri Piyush Goyal<br>Panel Discussion |
| | • **Session II - "Facing Post-COVID Challenges - Scenario in Health, Economy, Social, and International Relations"** |

| | |
|---|---|
| | Address by Minister of State for External Affairs, Shri V. Muraleedharan<br>Address by Minister of Health & Family Welfare, Dr. Harsh Vardhan<br>Panel Discussion |
| 1700-1745 hrs<br><br><br><br><br>1732 hrs | **Valedictory Session**<br><br>• Welcome Address by External Affairs Minister, Dr. S. Jaishankar.<br>• Announcement of Pravasi Bharatiya Samman Awards.<br>• Acceptance Speech by one of the Pravasi Bharatiya Samman Awardees.<br>• **Valedictory Address by Shri Ram Nath Kovind, Hon'ble President of India.**<br>• Vote of Thanks by Secretary (CPV&OIA), Ministry of External Affairs. |

## ರಾಷ್ಟ್ರೀಯ ತೋಟಗಾರಿಕೆ ಮೇಳ – 2021 ರ ಜಾಲತಾಣ (ವೆಬ್ ಸೈಟ್) ಬಿಡುಗಡೆ

ದೇಶದ ಅತೀ ದೊಡ್ಡ ರಾಷ್ಟ್ರೀಯ ತೋಟಗಾರಿಕೆ ಮೇಳ (NHF-2021)ದ ಜಾಲತಾಣವನ್ನು ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಹೆಚ್.ಆರ್) ನಿರ್ದೇಶಕ ಹಾಗೂ ಮೇಳದ ಛೇರ್ಮನ್ ಡಾ. ಎಂ. ಆರ್. ದಿನೇಶ್ ರವರು ಇಂದು ಬಿಡುಗಡೆಗೊಳಿಸಿದರು. ಐ.ಐ.ಹೆಚ್.ಆರ್ ನಲ್ಲಿ ನಡೆಸಿದ ಅಂತರ್ಜಾಲದ ಆನ್ ಲೈನ್‌ನಲ್ಲಿ ರಾಷ್ಟ್ರೀಯ ಪತ್ರಿಕಾ ಮೇಳದಲ್ಲಿ "ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದ್ದ ಪತ್ರಿಕಾ ಮಾಧ್ಯಮದವರ ಸಮ್ಮುಖದಲ್ಲಿ ಬಿಡುಗಡೆಗೊಳಿಸಲಾಯಿತು". ಅಂತರ್ಜಾಲ ತಾಣವಾದ http://nhf2021.iihr.res.in/ ಇದರ ಬೀಡುಗಡೆ ಸಮಾರಂಭದಲ್ಲಿ ಡಾ. ಎಂ. ವಿ. ಧನಂಜಯ ಮೇಳದ ಆಯೋಜನಾ ಕಾರ್ಯದರ್ಶಿ, ಡಾ. ಬಿ. ನಾರಾಯಣಸ್ವಾಮಿ, ಪ್ರಧಾನ ವಿಜ್ಞಾನಿ ಹಾಗೂ ಮಾಧ್ಯಮಗಳ ನೋಡಲ್ ಅಧಿಕಾರಿ, ಡಾ. ಕೆ. ಕೆ. ಉಪ್ರೇತಿ, ಪ್ರಧಾನ ವಿಜ್ಞಾನಿ ಮತ್ತು ಡಾ. ಶ್ರೀಧರ್ ಗುಟ್ಟಮ್ ಹಿರಿಯ ವಿಜ್ಞಾನಿ ಹಾಗೂ ದೇಶದಾದ್ಯಂತ ವಿವಿಧ ಮಾಧ್ಯಮಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ವೆಬ್ ಸೈಟ್ ಬಿಡುಗಡೆ ಗೊಳಿಸಿ ಮಾತನಾಡಿದ ಡಾ. ದೀನೆಶ್ ರವರು ಈ ಕೋವಿಡ್–19 ರ ಸಂಕಷ್ಟದಿಂದಾಗಿ ಮೇಳವನ್ನು ಜಾಲತಾಣದಲ್ಲಿ ಪ್ರಧಾನವಾಗಿ ಆಯೋಜಿಸಲಾಗಿದ್ದು ಕಡಿಮೆ ಸಂಖ್ಯೆಯಲ್ಲಿ ದೈಹಿಕ ಉಪಸ್ಥಿತಿಗೆ ಅನುವುಮಾಡಿಕೊಡಲಾಗುತ್ತಿದೆ. ಕಳೆದ ವರ್ಷ 2020ರ ಫೆಬ್ರವರಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಾಲ್ಕು ದಿನಗಳಲ್ಲಿ ದಿನಕ್ಕೆ ಸರಾಸರಿಯಂತೆ 20,000 ಜನ ಸಂಖ್ಯೆಯನ್ನು ಹೊಂದಿದ್ದು ಕೊನೆಯ ದಿನದಂದು ಭಾರಿ ಏರಿಕೆಯಾಗಿತ್ತು ಮತ್ತು ಒಟ್ಟು ಒಂದು ಲಕ್ಷಕ್ಕೂ ಹೆಚ್ಚಿನ ಸಂಖ್ಯೆ ಈ ಮೇಳದಲ್ಲಿ ಭಾಗಿಯಾಗಿತ್ತು ಎಂದು ಇವರು ತಿಳಿಕೊಟ್ಟರು.

"ಕೋವಿಡ್ ರೋಗದ ಕಾರ್ಯಾಚರಣೆ ವಿಧಾನಗಳನ್ನು ಅನುಸರಿಸಿ, ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಮತ್ತು ಜಾಲತಾಣಗಳಲ್ಲಿ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಮತ್ತು ಕನಿಷ್ಠ ರೈತ ಭೇಟಿಯ ಸಭೆಗಳು ಮತ್ತು ಸಂವಾದನಗಳೊಂದಿಗೆ ದೇಶದಾದ್ಯಂತ ವಿವಿಧ ಪಾಲುಗಾರರೊಂದಿಗೆ ಸಂವಹನ ನಡೆಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದು" ಎಂದು ಹೇಳಿದರು. ಈ ವರ್ಷದ ಮೇಳದ ಧ್ಯೇಯಘೋಷವೇನೆಂದರೆ, ***ತೋಟಗಾರಿಕೆ: ಸ್ಟಾರ್ಟ್ ಅಪ್ ಮತ್ತು ಸ್ಟಾಂಡ್ ಅಪ್ ಇಂಡಿಯಾ.*** ಸಂಸ್ಥೆಯು ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳನ್ನು ವಿವಿಧ ಪಾಲುಗಾರರಿಂದ ತಿಳಿದುಕೊಳ್ಳಬಹುದು. ತೋಟಗಾರಿಕೆ ಹೆಚ್ಚಿನ ಮೌಲ್ಯದ ಕ್ಷೇತ್ರವಾಗಿರುವುದರಿಂದ ಯುವಕರಿಗೆ ಭಾರತವನ್ನು ಸಮೃದ್ಧ ಮತ್ತು ಸುರಕ್ಷಿತವಾದ ಪೌಷ್ಠಿಕ ಆಹಾರ ದೊರಕುವ ದೇಶವನ್ನಾಗಿಸಲು ಈ ಮೇಳ ಅವಕಾಶ ಒದಗಿಸುತ್ತದೆ ಎಂದು ಹೇಳಿದರು.

ಡಾ. ಧನಂಜಯರವರು, ಈ ಮೇಳವನ್ನು ಹೇಗೆ ಯೋಜಿಸಲಾಗಿತ್ತಿದೆ ಮತ್ತು ತಂತ್ರಜ್ಞಾನಗಳ ಪ್ರದರ್ಶನದ ಬಗ್ಗೆ ವಿವರಿಸಿದರು. ಈ ಮೇಳವನ್ನು ಸೊಸೈಟಿ ಫಾರ್ ಪ್ರೊಮೋಶನ್ ಆಫ್ ಹಾರ್ಟಿಕಲ್ಚರ್, ಬೆಂಗಳೂರು ಮತ್ತು ಬೆಸ್ಟ್ ಹಾರ್ಟ್ ಆಫ್ ಐ.ಸಿ.ಎ.ಆರ್–ಐ.ಐ.ಹೆಚ್.ಆರ್, ಬೆಂಗಳೂರು, ಐ.ಸಿ.ಎ.ಆರ್ – ಅಟಾರಿ, ಬೆಂಗಳೂರು (ಜೋನ್ – 11), ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಗುರುಗ್ರಾಮ್ ಮತ್ತು ಶ್ರೀ. ಶ್ರೀ. ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ಟ್ರಸ್ಟ್, ಬೆಂಗಳೂರಿನ ಉತ್ತೇಜಕರೊಂದಿಗೆ ಆಯೋಜಿಸಲಾಗಿದೆ. ಈ ಸಂದರ್ಭದಲ್ಲಿ 11 ಐ.ಸಿ.ಎ.ಆರ್–ಅಟಾರಿ, ತೋಟಗಾರಿಕೆ ವಿಶ್ವವಿದ್ಯಾಲಯಗಳು ಮತ್ತು ದೇಶದ ಎಲ್ಲಾ ರಾಜ್ಯಾ ತೋಟಗಾರಿಕೆ ವಿಭಾಗಗಳು ಭಾಗವಹಿಸುತ್ತವೆ ಎಂದು ಇವರು ಮಾಹಿತಿ ನೀಡಿದರು. 700ಕ್ಕೂ ಹೆಚ್ಚು ಕೃಷಿ ವಿಜ್ಞಾನ ಕೇಂದ್ರಗಳು, ರೈತ ವಿಜ್ಞಾನ ಕೇಂದ್ರಗಳು 300ಕ್ಕೂ ಹೆಚ್ಚು ರೈತರ ಉತ್ಪಾದಕರ ಸಂಘಗಳು ಹಾಗೂ ಎ.ಓ.ಎಲ್ ರೈತ ತರಬೇತಿ ಕೇಂದ್ರಗಳು ರಾಷ್ಟ್ರದ 16 ರಾಜ್ಯಗಳಿಂದ ಅಟಾರಿಗಳ ಮೂಲಕ ಸಂಪರ್ಕ ಪಡೆದಿವೆ ಮತ್ತು ಪಾಲುಗಾರರಿಗೆ ಅನುಕೂಲವಾಗುವಂತೆ ಆಯಾ ವಲಯಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಐ.ಸಿ.ಎ.ಆರ್–ಐ.ಐ.ಹೆಚ್.ಆರ್ ತಜ್ಞರಿಂದ ಹಾಗೂ ತೋಟಗಾರಿಕೆಗೆ ಸಂಬಂದಪಟ್ಟ ಐ.ಸಿ.ಎ.ಅರ್ ಸಂಸ್ಥೆಗಳಿಂದ ನಡೆಸಿಕೊಡಲಾಗುತ್ತದೆ.

ಈ ಮೇಳದ ಮುಖ್ಯ ಗುರಿಯೆಂದರೆ ಐ.ಸಿ.ಎ.ಆರ್–ಐ.ಐ.ಹೆಚ್.ಆರ್ ನ ತಂತ್ರಜ್ಞಾನಗಳನ್ನು ಪ್ರದರ್ಶಿಸುವುದು ಹಾಗೂ ಈ ತಂತ್ರಜ್ಞಾನಗಳನ್ನು ಉದ್ಯಮಶೀಲತೆಯಾಗಿ ಪಡೆದುಕೊಳ್ಳಲು ರೈತ ಉತ್ಪಾದಕರ ಸಂಘಗಳೊಂದಿಗೆ ಸಂಪರ್ಕ ಸಾಧಿಸುವುದಾಗಿದೆ.

ಐ.ಸಿ.ಎ.ಆರ್–ಐ.ಐ.ಹೆಚ್.ಆರ್ ನ ಪ್ರಧಾನ ವಿಜ್ಞಾನಿ ಹಾಗು ಮಾಧ್ಯಮಗಳ ನೋಡಲ್ ಅಧಿಕಾರಿ ಡಾ. ಬಿ. ನಾರಾಯಣಸ್ವಾಮಿ ಮಾತನಾಡಿ... ಈ ಮೇಳಕ್ಕೆ ಸೇರ್ಪಡೆಗೊಂದಿರುವ ಪತ್ರಿಕಾ ಮತ್ತು ಮಾಧ್ಯಮ ವೃತ್ತಿಪರರು ಈ ಮೇಳ ಕುರಿತು ವ್ಯಾಪಕ ಪ್ರಚಾರವನ್ನು ನೀಡುವಂತೆ ಹಾಗೂ ತಂತ್ರಜ್ಞಾನಗಳನ್ನು ದೇಶದಾದ್ಯಂತ  ಕೃಷಿಕರಿಗೆ ತಲೂಪಿಸಲು ಸಹಕಾರ ಕೋರಿದರು.

### ಭಾ.ಕೃ.ಅನು.ಪ-ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ**https://iihr.res.in/** ಕುರಿತು

ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ, ನವದೆಹಲಿ ಯ ಅಡಿಯಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನ ಸ್ಥಾಪನೆ.

**ಧ್ಯೇಯೋದ್ಯೇಶ:**

- ಉಷ್ಣವಲಯದ ಮತ್ತು ಉಪ-ಉಷ್ಣವಲಯದ ತೋಟಗಾರಿಕೆ ಬೆಳೆ (ಹಣ್ಣು, ತರಕಾರಿ, ಅಲಂಕಾರಿಕ, ಔಷಧೀಯ ಮತ್ತು ಹಣಬೆ) ಗಳ ಉತ್ಪಾದಕತೆ ಮತ್ತು ಬಳಕೆಯನ್ನು ಹೆಚ್ಚಿಸಲು ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಲು ಮೂಲ ಮತ್ತು ಅನ್ವಯಿಕ ಸಂಶೋಧನೆಗಳನ್ನು ಕೈಗೊಳ್ಳುವುದು.
- ತೋಟಗಾರಿಕೆಗೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಯ ಭಂಡಾರವಾಗಿ ಕಾರ್ಯನಿರ್ವಹಿಸುವುದು.
- ತೋಟಗಾರಿಕೆ ಉತ್ಪಾದನೆಗಾಗಿ ಆಧುನಿಕ ತಂತ್ರಜ್ಞಾನಗಳಲ್ಲಿ ವೈಜ್ಞಾನಿಕ ಮಾನವಶಕ್ತಿಯ ಶ್ರೇಣೀಕರಣದ ತರಬೇತಿ ಕೇಂದ್ರವಾಗಿ ಕಾರ್ಯನಿರ್ವಹಿಸುವುದು ಮತ್ತು
- ಮೇಲಿನ ಉದ್ದೇಶಗಳನ್ನು ಸಾಧಿಸುವಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಸಹಕರಿಸುವುದು.

## ಸಾಧನೆಗಳು

- 50 ವರ್ಷಗಳ ಅಸ್ತಿತ್ವವನ್ನು ಪೂರ್ಣಗೊಳಿಸಲಾಗಿದ್ದು, 54 ತೋಟಗಾರಿಕಾ ಬೆಳೆಗಳಲ್ಲಿ (13 ಹಣ್ಣುಗಳು, 26 ತರಕಾರಿಗಳು, 10 ಹೂಗಳು ಮತ್ತು 5 ಔಷಧೀಯ ಬೆಳೆಗಳು) ಕೆಲಸ ಮಾಡುತ್ತಿದೆ.
- 302 ತಳಿಗಳನ್ನು ಬಿಡುಗಡೆ ಮಾಡಲಾಗಿದ್ದು, ಅವುಗಳಲ್ಲಿ 38 ಹಣ್ಣು, 136 ತರಕಾರಿ, 115 ಹೂವುಮತ್ತು 13 ಔಷಧೀಯ ಬೆಳೆಗಳು ಸೇರಿವೆ.
- ಬೆಳೆ ಉತ್ಪಾದನೆ ಮತ್ತು ರಕ್ಷಣೆಯ 163 ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಲಾಗಿದೆ.
- 104 ತಂತ್ರಜ್ಞಾನಗಳನ್ನು ವಾಣಿಜ್ಯೀಕರಣಗೊಳಿಸಲಾಗಿದ್ದು, 400 ಪ್ರಯೋಜನಾರ್ಥಿಗಳಿಗೆ 800 ಪರವಾನಗಿಗಳನ್ನು ನೀಡಲಾಗಿದೆ.
- ಈವರೆಗೆ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಸ್ನಾತಕೋತ್ತರ ಪದವಿಗಳನ್ನುಭಾ.ತೋ.ಸಂ.ಸಂಸ್ಥೆಯ ಮೂಲಕ ಪಡೆದಿರುತ್ತಾರೆ.
- ರಾಷ್ಟ್ರದ ಆರ್ಥಿಕತೆಗೆಭಾ.ತೋ.ಸಂ.ಸಂಸ್ಥೆಯ ಕೊಡುಗೆ ಪ್ರತಿ ವರ್ಷ ರೂ. 13,000 ಕೋಟಿಗಳಿಗೂ ಅಧಿಕ.

## ಹೆಚ್ಚುವರಿ ಮಾಹಿತಿ ಮತ್ತು ಹೊಸ ವಿಷಯಗಳಿಗಾಗಿ ಈ ಕೆಳಗಿನ ಲಿಂಕ್‌ಗಳಿಗೆ ಭೇಟಿ ನೀಡಿ

1. NHF2021 https://nhf2021.iihr.res.in/
2. SPH https://sphindia.org/
3. https://bessthort.com/icar-iihr-technologies/

ಎನ್‌ಎಚ್‌ಎಫ್ 2021 ಲೋಗೋ

NHF2021
National Horticulture Fair
Horticulture: For Start-up and Stand-up India

**ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:**
ಡಾ. ಎಂ. ವಿ. ಧನಂಜಯ,
ಪ್ರಧಾನ ವಿಜ್ಞಾನಿ ಮತ್ತು ಮೇಳದ ಆಯೋಜನಾ ಕಾರ್ಯದರ್ಶಿ,
nhf.iihr@icar.gov.in
9141704357,9379079274

ಡಾ. ಬಿ. ನಾರಾಯಣಸ್ವಾಮಿ,
ಪ್ರಧಾನ ವಿಜ್ಞಾನಿ ಹಾಗೂ ಮಾಧ್ಯಮಗಳ ನೋಡಲ್ ಅಧಿಕಾರಿ,
bnswamykvk@gmail.com
9480290345

**ಸಹಿ**

## Karnataka State Pollution Control Board

## ParisaraBhavan, Bengaluru

## AQI of the CAAQM stations established in Bengaluru City

**Date :8.1.2021**

| Sl. No. | Station | AQI | Category | Prominent Pollutant |
|---|---|---|---|---|
| 45 | Veterinary College Hebbal | 55 | Satisfactory | $PM_{10}$ |
| 47 | Jayanagar 5th Block, Shalini ground | 51 | Satisfactory | $PM_{10}$ |
| * | KAVIKA, Mysore Road | 55 | Satisfactory | $PM_{10}$ |

| | | | | |
|---|---|---|---|---|
| 24 | Rajeev Gandhi Institute of Chest Disease, NIMHANS, Hombegowda Nagar | 22 | Good | $PM_{10}$ |
| 52 | HSR Layout, near Central Silkboard | 51 | Satisfactory | $O_3$ |
| 6 | City Railway Station, Magestic, Bengaluru | 96 | Satisfactory | CO |
| 7 | Saneguruvanahalli, NisargaBhavan, KSPCB, Shivanagara | 40 | Good | $PM_{10}$ |
| 8 | BWSSB, Kadabesanahalli | 22 | Good | $NO_2$ |
| 9 | Peenya | 150 | Moderate | $O_3$ |
| 10 | BTM Layout | * | * | * |

| **Category (Range)** | **Possible Health Impacts** | **Category (Range)** | **Possible Health Impacts** |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ಬೆಂಗಳೂರು.

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಕ್ಷಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 8.1.2021**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 55 | ತೃಪ್ತಿಕರ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 51 | ತೃಪ್ತಿಕರ | $PM_{10}$ |
| 3 | ಕವಿಕ, ಮೈಸೂರುರಸ್ತೆ | 55 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 22 | ಉತ್ತಮ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರಗೇಷ ಮಂಡಳಿ ಹತ್ತಿರ | 51 | ತೃಪ್ತಿಕರ | $O_3$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 96 | ತೃಪ್ತಿಕರ | CO |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 40 | ಉತ್ತಮ | $PM_{10}$ |
| 8 | BWSSB, ಕಾಡಬೀಸನಹಳ್ಳಿ | 22 | ಉತ್ತಮ | $NO_2$ |
| 9 | ಪೀಣ್ಯ | 150 | **ಸಾಧಾರಣ** | $O_3$ |
| 10 | ಬಿಟಿಎಂ ಲೇಔಟ್ | * | * | * |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮ ಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |